# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯ, ಹೆಗ್ಗನಹಳ್ಳಿ ಉಪವಿಭಾಗ

### ವಾರ್ಡ್ ನಂ.71 : ಹೆಗ್ಗನಹಳ್ಳಿ

**ದಿನಾಂಕ: 24.02.2022 ರಂದು ಬೆಳಿಗ್ಗೆ 11.30 ಗಂಟೆಗೆ ಶ್ರೀ ಬಿ.ಆರ್.ರವಿಕುಮಾರ್, ನೋಡಲ್ ಅಧಿಕಾರಿ, ವಾರ್ಡ್ 71 ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಗ್ಗನಹಳ್ಳಿ ಉಪವಿಭಾಗ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:**

**ಸಭೆಯಲ್ಲಿ ಹಾಜರಿದ್ದವರು:**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಬಿ.ಆರ್.ರವಿಕುಮಾರ್ | ನೋಡಲ್ ಅಧಿಕಾರಿ–ವಾರ್ಡ್ ನಂ.71 |
| 2 | ಜಯಂತ್ ಕುಮಾರ್ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಹಾಗೂ ಸಂಚಾಲಕರು–ವಾರ್ಡ್ 71 |
| 3 | ಶ್ರೀ ಅವೀಶ್ ಹೆಚ್ ಎಂ | ಸಹಾಯಕ ಅಭಿಯಂತರರು, ವಾರ್ಡ್ 70 |
| 4 | ಕೆ ಶಿವಲಿಂಗೇಗೌಡ | ತೋಟಗಾರಿಕೆ ಇಲಾಖೆ |
| 5 | ಶ್ರೀ ಕಮಲ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 6 | ಶ್ರೀ ವೆಂಕಟರಾಜು | ಸದಸ್ಯರು |
| 7 | ಹೆಚ್ ಎಸ್ ಉಮೇಶ್ | ಸದಸ್ಯರು |
| 8 | ಹೆಚ್ ಮಂಜುನಾಥ್ | ಸದಸ್ಯರು |
| 9 | ಎನ್ ನಟರಾಜು | ಸದಸ್ಯರು |
| 10 | ಕೆ ಎ ಉಮೇಶ್ | ಸದಸ್ಯರು |
| 11 | ಗಂಗರೆಡ್ಡಿ | ಕಂದಾಯ ಪರಿವೀಕ್ಷಕರು |
| 12 | ಎನ್ ಮುರುಳಿ | ಕಂದಾಯ ವಸೂಲಿಗಾರರು |
| 13 | ಹೆಚ್ ಟಿ ಮುನಿರಾಜು | ಕಂದಾಯ ವಸೂಲಿಗಾರರು |
| 14 | ಅನುಪಮ | ಕಂದಾಯ ವಸೂಲಿಗಾರರು |

## :ನಡಾವಳಿಯ ವರದಿ:

- ಕಾರ್ಯದರ್ಶಿಗಳಾದ ಶ್ರೀ ಅವೀಶ್ ಹೆಚ್ ಎಂ ಮಾತನಾಡುತ್ತಾ ಸಭೆಗೆ ಹಾಜರಾದ ನೋಡಲ್ ಅಧಿಕಾರಿ ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು.

**ವಿಷಯ ಸಂಖ್ಯೆ: 1:- ಹೊಯ್ಸಳ ನಗರದ 2ನೇ ಮುಖ್ಯರಸ್ತೆಯಲ್ಲಿ ರಸ್ತೆ ದುರಸ್ಥಿ ಪಡಿಸುವ ಬಗ್ಗೆ**

ಸದಸ್ಯರಾದ ವೆಂಕಟರಾಜು ರವರು ಮಾತನಾಡಿ, ಹೆಗ್ಗನಹಳ್ಳಿ ವ್ಯಾಪ್ತಿಯ ಸುಂಕದಕಟ್ಟೆ, ಹೊಯ್ಸಳನಗರದಲ್ಲಿ 2ನೇ ಮುಖ್ಯರಸ್ತೆ, ಅಯ್ಯಪ್ಪ ದೇವಸ್ಥಾನದ ಎದುರು ಪೂರ್ತಿ ರಸ್ತೆ ಕಿತ್ತುಹೋಗಿದ್ದು, ಇದರಿಂದಾಗಿ ಸಾರ್ವಜನಿಕರ ಸಂಚಾರಕ್ಕೆ ಆಡಚಣೆಯಾಗಿದ್ದು ರಸ್ತೆ ದುರಸ್ಥಿಪಡಿಸುವಂತೆ ಕೋರಿದರು.

ಇದಕ್ಕೆ ಸಹಾಯಕ ಅಭಿಯಂತರರು ರವರು ಮಾತನಾಡಿ ಸದರಿ ಸ್ಥಳವನ್ನು ಈಗಾಗಲೇ ಪರಿಶೀಲಿಸಲಾಗಿದ್ದು ಸದರಿ ಭಾಗವು ಪೂರ್ತಿ ಹಾಳಾಗಿದ್ದು ಈ ಸಂಬಂಧ ಅನುದಾನ ನಿರೀಕ್ಷಿಸಲಾಗಿದೆ ಎಂದು ತಿಳಿಸಿದರು.

- **ವಿಷಯ ಸಂಖ್ಯೆ: 2:- ರಸ್ತೆಗುಂಡಿಗಳ ಬಗ್ಗೆ**

  ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಗುಂಡಿಗಳು ಹೆಚ್ಚಾಗಿದ್ದು, ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

  ಇದಕ್ಕೆ ಸಹಾಯಕ ಅಭಿಯಂತರರು ಮಾತನಾಡಿ, ವಾರ್ಡ್ 71ರ ವ್ಯಾಪ್ತಿಯ ರಸ್ತೆಗಳಲ್ಲಿ ಬಿದ್ದಿರುವ ರಸ್ತೆಗುಂಡಿಗಳನ್ನು ಪಟ್ಟಿಮಾಡಿಕೊಂಡು, ಶೇಕಡಾ 60ರಷ್ಟು ರಸ್ತೆಗುಂಡಿಗಳನ್ನು ಮುಚ್ಚಲಾಗಿದೆ. ಇನ್ನುಳಿದ ರಸ್ತೆಗುಂಡಿಗಳನ್ನು ಮುಚ್ಚಲು ವೆಟ್‌ಮಿಕ್‌ಅನ್ನು ಅಳವಡಿಸಲಾಗಿರುತ್ತದೆ. ಶೀಘ್ರದಲ್ಲಿ ಡಾಂಬರು ಹಾಕಲಾಗುವುದು ಎಂದು ತಿಳಿಸಿದರು.

- **ವಿಷಯ ಸಂಖ್ಯೆ: 3 :- ಗಜಾನನ ನಗರ, ಕೆ.ಟಿ.ಜಿ ಮುಖ್ಯರಸ್ತೆ, ಅಭಯಹಸ್ತ ದೇವಸ್ಥಾನದ ಬಳಿ ಚರಂಡಿ ಬ್ಲಾಕ್ ಆಗಿರುವ ಬಗ್ಗೆ**

ಸದಸ್ಯರಾದ ನಟರಾಜ್ ರವರು ಮಾತನಾಡಿ ಗಜಾನನ ನಗರ, ಕೆ.ಟಿ.ಜಿ ಮುಖ್ಯರಸ್ತೆ, ಅಭಯಹಸ್ತ ದೇವಸ್ಥಾನದ ಬಳಿ ಚರಂಡಿ ಬ್ಲಾಕ್ ಆಗಿದ್ದು, ತೆರವುಗೊಳಿಸುವಂತೆ ಕೋರಿದರು.

ಇದಕ್ಕೆ ಸಹಾಯಕ ಅಭಿಯಂತರರು ಮಾತನಾಡಿ, ಗಜಾನನ ನಗರ, ಕೆ.ಟಿ.ಜಿ ಮುಖ್ಯರಸ್ತೆ, ಅಭಯಹಸ್ತ ದೇವಸ್ಥಾನದ ಬಳಿ ತುಂಬಿರುವ ಹೂಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿ/ನೌಕರರಿಗೆ ಮತ್ತು ಸದಸ್ಯರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆಯೂ ಈ ಸಭೆಗಳಲ್ಲಿ ಪೂರ್ವತಯಾರಿಯೊಂದಿಗೆ ಪಾಲ್ಗೊಂಡು ವಾರ್ಡ್ ನಂ.71ರ ಅಭಿವೃದ್ಧಿಗೆ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

➢ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ಜಯಂತ್ ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು/ನೌಕರರಿಗೂ ಮತ್ತು ಸದಸ್ಯರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ 71, ಹೆಗ್ಗನಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ.71, ಹೆಗ್ಗನಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1) ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ, ರವರ ಆದ್ಯ ಗಮನಕ್ಕೆ ಕಳುಹಿಸಿದೆ.
2) ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
3) ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
4) ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
6) ಸಹಾಯಕ ಕಂದಾಯ ಅಧಿಕಾರಿ (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
7) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.71 ರವರ ಮಾಹಿತಿಗಾಗಿ
8) ವಾರ್ಡ್ ಸಮಿತಿ ಸಭೆಯ ಸದಸ್ಯರಿಗೆ ಮಾಹಿತಿಗಾಗಿ ಕಳುಹಿಸಿದೆ.
9) ಕಛೇರಿ ಕಡತಕ್ಕೆ